**ಮರುನಿರೂಪಣೆ: ಹಿ.ಚಿ. ಬೋರಲಿಂಗಯ್ಯ**

ಕಲೆ: ಭಾವು ಪತ್ತಾರ್

# ಚಿನ್ನ ಮತ್ತು ಮರ

ಒಂದು ಊರಿನಲ್ಲಿ ಒಬ್ಬ ರಾಜನಿದ್ದ. ಅವನಿಗೆ ನೂರು ಜನ ರಾಣಿಯರಿದ್ದರು. ಅವನ ಅರಮನೆ ವೈಭವದಿಂದ ಕೂಡಿತ್ತು. ಅರಮನೆಯ ಮೇಲೆ ಚಿನ್ನದ ಕಳಸಗಳಿದ್ದವು. ರಾಜ ಸ್ನಾನ ಮಾಡುತ್ತಿದ್ದ ಬಚ್ಚಲು ಮನೆಯೂ ಚಿನ್ನದ್ದೇ. ತನ್ನ ರಾಣಿಯರಿಗಾಗಿ ಚಿನ್ನದ ಹೊದಿಕೆಯ ಈಜುಕೊಳವನ್ನು ಕಟ್ಟಿಸಿದ್ದ. ಅವರು ಊಟ ಮಾಡುತ್ತಿದ್ದ ತಟ್ಟೆ ಲೋಟಗಳೂ ಮಿರಮಿರ ಮಿಂಚುವ ಚಿನ್ನದ ಪಾತ್ರೆಗಳೇ. ಒಟ್ಟಿನಲ್ಲಿ ಅವನ ಇಡೀ ಅರಮನೆ ಚಿನ್ನದ ವಸ್ತುಗಳಿಂದ ಹೊಳೆಯುತ್ತಿತ್ತು. ರಾಜನಿಗೆ ಇದೆಲ್ಲಾ ಹೇಗೆ ಬಂತು? ಅವನು ತನ್ನ ಪ್ರಜೆಗಳ ಮೇಲೆ ವಿಪರೀತವಾದ ತೆರಿಗೆ ಹಾಕಿ ಅಪಾರ ಪ್ರಮಾಣದ ದುಡ್ಡು ವಸೂಲಿ ಮಾಡುತ್ತಿದ್ದ. ಹಣ ಇಲ್ಲದವರ ಹತ್ತಿರ ದವಸ, ದಾನ್ಯ, ಹಸು, ಕರುಗಳನ್ನು ಬಿಡುತ್ತಿರಲಿಲ್ಲ. ತನ್ನ ಸೈನಿಕರನ್ನು ಕಳಿಸಿ ಲೂಟಿ ಮಾಡುತ್ತಿದ್ದ. ಯಾವುದೂ ಸಿಗದಿದ್ದರೆ ಅದೇ ಸೈನಿಕರ ಮೂಲಕ ರೈತರ ಹೊಲಗಳಲ್ಲಿ ಬೆಳೆದ ದೊಡ್ಡ ದೊಡ್ಡ ಬೆಲೆಬಾಳುವ ಮರಗಳನ್ನು

